# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮ 2000

**ಪರಿವಿಡಿ**

**ನಿಯಮ** ಪುಟ ಸಂ.


1. ಶೀರ್ಷಿಕೆ ಮತ್ತು ಆರಂಭ 104
2. ಪರಿಭಾಷೆಗಳು 104
   (1) (a) ಅಧಿನಿಯಮ 104
   (b) ಪರಿಚ್ಛೇದ 104
   (2) ಪದಗಳು ಮತ್ತು ವ್ಯಾಖ್ಯಾನ 104
3. ವೇತನ 104
4. ತುಟ್ಟಿ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ 104
5. ರಜೆ ಮತ್ತು ಬಿಟ್ಟುಕೊಡುವ ರಜೆ (ರಜೆ ವೇತನ) 104
6. ಪಿಂಚಣಿ 105
7. ಉಪದಾನ (ಗ್ರಾಚ್ಯುಟಿ) 107
8. ಇತರ ಭತ್ಯೆಗಳು ಮತ್ತು ವಿಷಯಗಳಿಗೆ ಸಂಬಂಧಿಸಿದಂತೆ ಅನ್ವಯಿಸುವ ನಿಯಮಗಳು 107
9. ಪ್ರವಾಸ 107
10. ರಾಜೀನಾಮೆ 107
11. ಕೆಲವು ಸಂದರ್ಭಗಳಲ್ಲಿ ನಿಯಮಗಳ ಸಡಿಲಿಕೆಯ ಅವಕಾಶಗಳು 107


ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪ್ರಕರಣದಲ್ಲಿನ ಉಪಕಲಮು (1) ರ ಅಗತ್ಯತೆಯಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮಗಳು, 2000 ದ ಕರಡನ್ನು ಅಧಿಸೂಚನೆ ಸಂ DE 5 PSR 99, ದಿನಾಂಕ 02.02.2000, ಭಾಗ IV, ಪ್ರಕರಣ 2-C(i) ರ ಕರ್ನಾಟಕ ರಾಜ್ಯದ ಅಸಾಧಾರಣ ಗೆಜೆಟ್‌ನ ದಿನಾಂಕ 03.02.2000ದ ಆವೃತ್ತಿಯಲ್ಲಿ ಪ್ರಕಟಿಸಿದ್ದು, ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಆ ಮೂಲಕ ಪರಿಣಾಮ ಬೀರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಯಿತು.

ಅದೇ ರೀತಿ, ಸದರಿ ರಾಜ್ಯಪತ್ರವನ್ನು 03ನೇ ಫೆಬ್ರವರಿ 2000 ದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಯಿತು.

ಅಲ್ಲದೇ, ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಒಳಗೆ ಸ್ವೀಕೃತವಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿದೆ.

ಆದುದರಿಂದ ಈಗ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪ್ರಕರಣದಲ್ಲಿ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಾವಳಿಗಳನ್ನು ರಚಿಸಿದೆ, ಯಾವುವೆಂದರೆ: -

1) **ಶೀರ್ಷಿಕೆ ಮತ್ತು ಆರಂಭ** -

1) ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮ ೨೦೦೦ ಎಂದು ಕರೆಯಲಾಗುತ್ತದೆ.

2) ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಇವುಗಳು ಜಾರಿಗೆ ಬರತಕ್ಕದ್ದು.

2) **ಪರಿಭಾಷೆಗಳು** -

1) ಈ ನಿಯಮಗಳಲ್ಲಿ, ಸಂದರ್ಭಕ್ಕೆ ಅನ್ಯತಾ ಅಗತ್ಯವಿಲ್ಲದ ಹೊರತು: -

a) "**ಅಧಿನಿಯಮ**" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999 (1999ರ ಕರ್ನಾಟಕ ಅಧಿನಿಯಮ 25).

b) "**ಪರಿಚ್ಛೇದ**" ಎಂದರೆ ಅಧಿನಿಯಮದ ಪರಿಚ್ಛೇದ.

2) ಈ ನಿಯಮಗಳಲ್ಲಿ ಪರಿಭಾಷಿಸದಿರುವ ಪದ ಮತ್ತು ಪದಾವಳಿಗಳು ಅಧಿನಿಯಮ ದಲ್ಲಿ ಅನುಕ್ರಮವಾಗಿ ನಿಗದಿ ಮಾಡಿದ ಅರ್ಥವನ್ನು ಹೊಂದಿರತಕ್ಕದ್ದು.

3) **ವೇತನ** -

1) ಅಧ್ಯಕ್ಷರು ಮತ್ತು ಇತರ ಸದಸ್ಯರು ತಿಂಗಳಿಗೆ ಇಪ್ಪತ್ತಾರು ಸಾವಿರ ರೂಪಾಯಿ ವೇತನವನ್ನು ಪಡೆಯತಕ್ಕದ್ದು.
ಒಂದು ವೇಳೆ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ನೇಮಕಗೊಂಡ ವ್ಯಕ್ತಿಯು ಯಾವುದೇ ಪಿಂಚಣಿ ಪಡೆಯುತ್ತಿದ್ದರೆ, ಅಂತಹ ವ್ಯಕ್ತಿಯ ವೇತನದಲ್ಲಿ, ಅವನು / ಅವಳು ಪಡೆಯುತ್ತರುವ ಸಂಗ್ರಹಿತ (commuted portion) ಭಾಗವನ್ನೂ ಒಳಗೊಂಡಂತೆ ಒಟ್ಟು ಪಿಂಚಣಿ ಹಣವನ್ನು ಕಡಿಮೆಗೊಳಿಸಲಾಗುತ್ತದೆ.
ಮುಂದುವರಿದಂತೆ, ಅಧ್ಯಕ್ಷರು ಮತ್ತು ಇತರ ಸದಸ್ಯರು ಅಂತಹ ವೇತನವನ್ನು ನಿಗದಿಪಡಿಸುವ ಮೊದಲು ಮೂಲ ವೇತನದ ಮೇಲೆ ಸ್ವೀಕಾರಾರ್ಹ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

2) ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಯಾವುದೇ ಸದಸ್ಯರಿಗೆ ಪ್ರತಿ ತಿಂಗಳಿಗೆ ವಿಶೇಷ ಭತ್ಯೆಯಾಗಿ ರೂ.4,000 ವನ್ನು ನೀಡಲಾಗುತ್ತದೆ. ಈ ಭತ್ಯೆಯನ್ನೂ ಸಹ ತುಟ್ಟಿ ಭತ್ಯೆಯ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದು.

4) **ತುಟ್ಟಿ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ** - ಕರ್ನಾಟಕದ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಿಗೆ ಅನ್ವಯವಾಗುವಂತಹ ತುಟ್ಟಿ ಭತ್ಯೆ ಮತ್ತು ನಗರ ಪರಿಹಾರದ ಭತ್ಯೆಯನ್ನು ಪಡೆಯಲು ಅಧ್ಯಕ್ಷರು ಅಥವಾ ಸದಸ್ಯರಿಗೆ ಅರ್ಹರಾಗಿರುತ್ತಾರೆ.

**5) ರಜೆ ಮತ್ತು ರಜೆಯ ವೇತನ –**

1) ಅಧ್ಯಕ್ಷರು ಮತ್ತು ಇತರೆ ಸದಸ್ಯರು ರಜೆ ಮತ್ತು ರಜಾ ವೇತನಗಳನ್ನು ಈ ಕೆಳಗಿನಂತೆ ಪಡೆಯಲು ಅರ್ಹರಾಗಿರುತ್ತಾರೆ;

(i) ಪೂರ್ಣಗೊಂಡ ಪ್ರತಿ ಕ್ಯಾಲೆಂಡರ್ ವರ್ಷದ ಸೇವೆಗೆ ಮೂವತ್ತು ದಿನಗಳ ದರದಲ್ಲಿ ಅಥವಾ ಅದರ ಒಂದು ಭಾಗಕ್ಕೆ ಸರಿಹೊಂದುವಂತೆ ಗಳಿಕೆ ರಜೆ.

(ii) ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಅಥವಾ ಖಾಸಗಿ ವ್ಯವಹಾರದ ಮೇಲೆ ಪೂರ್ಣಗೊಂಡ ಪ್ರತಿ ಕ್ಯಾಲೆಂಡರ್ ವರ್ಷದ ಸೇವೆಗೆ ಇಪ್ಪತ್ತು ದಿನಗಳ ದರದಲ್ಲಿ ಅರ್ಧ ವೇತನ ರಜೆ ಮತ್ತು ಅರ್ಧ ವೇತನ ರಜೆಯ ಅವಧಿಯಲ್ಲಿನ ವೇತನವು, ಗಳಿಕೆ ರಜೆಯ ಅವಧಿಗೆ ಅನ್ವಯಿಸುವ ವೇತನದ ಅರ್ಧದಷ್ಟು ವೇತನಕ್ಕೆ ಸಮಾನವಾಗಿರುತ್ತದೆ.

(iii) ಸದಸ್ಯರ ವಿವೇಚನೆಯ ಮೇರೆಗೆ ವೈದ್ಯಕೀಯ ಆಧಾರದ ಮೇಲೆ ಅರ್ಧ ವೇತನದ ರಜೆಯನ್ನು ಪೂರ್ಣ ವೇತನ ರಜೆಗೆ ಮಾರ್ಪಾಡು ಮಾಡಬಹುದು, ಆದರೆ ಅದನ್ನು ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ನೀಡಲಾದ ವೈದ್ಯಕೀಯ ಪ್ರಮಾಣಪತ್ರದೊಂದಿಗೆ ಸಮರ್ಥಿಸಿಕೊಳ್ಳತಕ್ಕದ್ದು.

(iv) ಅವರ ಅಧಿಕಾರಾವಧಿಯಲ್ಲಿ ಗರಿಷ್ಠ ಒಂದು ನೂರ ಎಂಭತ್ತು ದಿನಗಳವರೆಗೆ ವೇತನ ಮತ್ತು ಭತ್ಯೆಗಳಿಲ್ಲದೆ ಅಸಾಧಾರಣ ರಜೆ.

2) ವಯೋನಿವೃತ್ತಿಯ ಸಮಯದಲ್ಲಿ ಗಳಿಕೆ ರಜೆಗೆ ಸಂಬಂಧಿಸಿದಂತೆ, ಅವರ ಲೆಕ್ಕದಲ್ಲಿರುವ ನಗರ ಪರಿಹಾರ ಭತ್ಯೆ ಅಥವಾ ಯಾವುದೇ ಇತರ ಭತ್ಯೆಯನ್ನು ಹೊರತುಪಡಿಸಿ, ಅಧ್ಯಕ್ಷರು ಅಥವಾ ಇತರ ಸದಸ್ಯರು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ರಜೆ ವೇತನ ಮತ್ತು ತುಟ್ಟಿಭತ್ಯೆಗೆ ಸಮಾನವಾದ ನಗದು ಸ್ವೀಕರಿಸಲು ಅರ್ಹರಾಗಿರುತ್ತಾರೆ, ಯಾವುವೆಂದರೆ -

a) ಅಂತಹ ಸ್ವೀಕಾರಾರ್ಹವಾದ ಪಾವತಿಗಳನ್ನು ಗಳಿಕೆ ರಜೆಯ ಗರಿಷ್ಠ ಒಂದು ನೂರ ಐವತ್ತು ದಿನಗಳ ಅವಧಿಗೆ ಸೀಮಿತಗೊಳಿಸತಕ್ಕದ್ದು.

b) ಈ ರೀತಿ ಸ್ವೀಕಾರಾರ್ಹವಾದ ನಗದನ್ನು ಒಂದು ಬಾರಿಯ ಇಡಿಗಂಟಿನ ರೂಪದಲ್ಲಿ ನಿವೃತ್ತಿ ಸಮಯದಲ್ಲಿ ನೀಡಲಾಗುವುದು.

c) ಗಳಿಕೆ ರಜೆಯನ್ನು ಮಂಜೂರು ಮಾಡುವ ಪ್ರಾಧಿಕಾರವೇ, ಗಳಿಕೆ ರಜೆಗೆ ಸಮಾನವಾದ ನಗದನ್ನು ಮಂಜೂರು ಮಾಡಲು ಅಧಿಕಾರವನ್ನು ಹೊಂದಿರುತ್ತದೆ.

3) ಕರ್ನಾಟಕದ ರಾಜ್ಯಪಾಲರು ಸದಸ್ಯ ಅಥವಾ ಅಧ್ಯಕ್ಷರಿಗೆ ರಜೆ ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**6) ನಿವೃತ್ತಿ ವೇತನ (ಪಿಂಚಣಿ) –**

**1)** ಈ ನಿಯಮಗಳಲ್ಲಿ, ಸಂದರ್ಭದ ಅಗತ್ಯವಿಲ್ಲದ ಹೊರತು -

**a)** ಇವುಗಳನ್ನು ಒಳಗೊಂಡಂತೆ 'ಸೇವೆ' -

(i) ಆಯೋಗದ ಅಧ್ಯಕ್ಷರು ಅಥವಾ ಸದಸ್ಯರಾಗಿ ಅಥವಾ ಎರಡೂ ಆಗಿ ಕರ್ತವ್ಯಕ್ಕಾಗಿ ಕಳೆದ ಸಮಯ.

(ii) ರಾಜ್ಯಪಾಲರ ಕೋರಿಕೆಯ ಮೇರೆಗೆ ಅಧ್ಯಕ್ಷರು ಅಥವಾ ಸದಸ್ಯರು ಇತರ ಕಾರ್ಯಗಳ ನಿರ್ವಹಣೆಯಲ್ಲಿ ಕರ್ತವ್ಯಕ್ಕಾಗಿ ಕಳೆದ ಸಮಯ.

(iii) ಕೇಂದ್ರ ಅಥವಾ ರಾಜ್ಯದ ಅಡಿಯಲ್ಲಿರುವ ಹುದ್ದೆ ಅಥವಾ ಕಚೇರಿಯಿಂದ ಅಧ್ಯಕ್ಷರ ಅಥವಾ ಸದಸ್ಯರ ಕಚೇರಿಗೆ ವರ್ಗಾವಣೆಯಾದಗ ಸೇರ್ಪಡಗೊಳ್ಳಲು ಸಮಯ, ಮತ್ತು

(iv) ಪ್ರತಿ ಅವಧಿಯಲ್ಲಿ, ಪೂರ್ಣ ಭತ್ಯೆಗಳ ಮೇಲೆ ಪಡೆದ ರಜೆಯಲ್ಲಿ, ಪಡೆದ ಒಟ್ಟು ದಿನಗಳು ಅಥವಾ ಒಂದು ತಿಂಗಳು, ಇದರಲ್ಲಿ ಕಡಿಮೆ ಇರುವಂತಹ ದಿನಗಳ ಸಂಖ್ಯೆ.

b) 'ಸೇವಾ ಪಿಂಚಣಿ' - ಅಧ್ಯಕ್ಷರು ಅಥವಾ ಸದಸ್ಯರಿಗೆ ಸಂಬಂಧಿಸಿದಂತೆ, ನೇಮಕಾತಿಯ ಮೊದಲು ಅಥವಾ ಸೇರ್ಪಡೆಗೊಳ್ಳುವ ದಿನಾಂಕದಂದು ಯಾರು ಕೇಂದ್ರ ಅಥವಾ ರಾಜ್ಯದ ಸೇವೆಯಲ್ಲಿದ್ದರು ಅವರು ಸದಸ್ಯರಾಗಿದ್ದ ಸೇವೆಯ ನಿಯಮಗಳ ಅಡಿಯಲ್ಲಿ ಅವರಿಗೆ ಒಪ್ಪಬಹುದಾದ ಪಿಂಚಣಿ.

2) ಈ ನಿಯಮಗಳ ನಿಬಂಧನೆಗಳಿಗೆ ಒಳಪಟ್ಟು, ಅಧ್ಯಕ್ಷರು ಅಥವಾ ಸದಸ್ಯರಿಗೆ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಸೇವೆಯನ್ನು ಪೂರ್ಣಗೊಳಿಸಿದರೆ ಮಾತ್ರ ಪಿಂಚಣಿ ಪಾವತಿಸಲಾಗುವುದು. ಅಧ್ಯಕ್ಷರು ಅಥವಾ ಸದಸ್ಯರನ್ನು ಸೇವೆಯಿಂದ ತೆಗೆದುಹಾಕಿದಲ್ಲಿ ಯಾವದೇ ಪಿಂಚಣಿ ಪಾವತಿಸಲಾಗುವುದಿಲ್ಲ. ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಸೇವೆಯನ್ನು ಪೂರೈಸಿದ ಅಧ್ಯಕ್ಷರು ಅಥವಾ ಸದಸ್ಯರು ತಮ್ಮ ಕಚೇರಿಯಿಂದ ಸ್ವಯಂಪ್ರೇರಿತ ನಿವೃತ್ತಿಯನ್ನು ತೆಗೆದುಕೊಂಡರೆ, ಮತ್ತು ಅಂತಹ ಸ್ವಯಂಪ್ರೇರಿತ ನಿವೃತ್ತಿಯನ್ನು ಸರ್ಕಾರವು ಅಂಗೀಕರಿಸಿದ್ದಲ್ಲಿ, ಈ ನಿಯಮಗಳ ಪ್ರಕಾರ ಅವರು ಪಿಂಚಣಿಗೆ ಅರ್ಹರಾಗಿರುತ್ತಾರೆ.

3) ಈ ನಿಯಮಗಳ ಅಡಿಯಲ್ಲಿ ಅಧ್ಯಕ್ಷರಿಗೆ ಅಥವಾ ಸದಸ್ಯರಿಗೆ ಪಿಂಚಣಿಯನ್ನುಜೀವಿತಾವಧಿಗೆ ಪಾವತಿಸಲಾಗುವುದು.

4) ಆಯೋಗದ ಅಧ್ಯಕ್ಷರು ಅಥವಾ ಸದಸ್ಯರು ಜವಾಬ್ದಾರಿಯನ್ನು ತ್ಯಜಿಸುವ ಸಂದರ್ಭದಲ್ಲಿ ಪಾವತಿಸಬೇಕಾದ ವಾರ್ಷಿಕ ಪಿಂಚಣಿ ಈ ಕೆಳಗಿನಂತಿರುತ್ತದೆ;

   a) ಅಧ್ಯಕ್ಷರಿಗೆ ಸಂಬಂಧಿಸಿದಂತೆ, ಅರ್ಧ ವರ್ಷದ ಸೇವಾವಧಿಗೆ ರೂ.2,250 ರಂತೆ, 5 ವರ್ಷಗಳ ಸೇವಾವಧಿಯನ್ನು ಪೂರೈಸಿದ್ದಲ್ಲಿ ವಾರ್ಷಿಕ ಗರಿಷ್ಠ ರೂ.22,500 ಆಗಿರುತ್ತದೆ.

   b) ಅಧ್ಯಕ್ಷರನ್ನು ಹೊರತುಪಡಿಸಿದಂತೆ ಇತರೆ ಸದಸ್ಯರಿಗೆ, ಅರ್ಧ ವರ್ಷದ ಸೇವಾವಧಿಗೆ ರೂ.1,715 ರಂತೆ, 5 ವರ್ಷಗಳ ಸೇವಾವಧಿಯನ್ನು ಪೂರೈಸಿದ್ದಲ್ಲಿ ವಾರ್ಷಿಕ ಗರಿಷ್ಠ ರೂ.17,150 ಆಗಿರುತ್ತದೆ.

   c) ಸದಸ್ಯರು ಅಥವಾ ಅಧ್ಯಕ್ಷರು 5 ವರ್ಷಗಳಿಗಿಂತ ಕಡಿಮೆ ಅವಧಿಯ ಸೇವೆ ಸಲ್ಲಿಸಿದ್ದಲ್ಲಿ, ಪೂರ್ತಿಗೊಳಿಸಿದ ಪ್ರತಿ ಅರ್ಧವರ್ಷದ ಸೇವಾವಧಿಗೆ ಕ್ರಮವಾಗಿ ರೂ.1,715 ಅಥವಾ ರೂ.2,250 ರಂತೆ ಲೆಕ್ಕಾಚಾರ ಹಾಕುವುದು. ಪಿಂಚಣಿ ಲೆಕ್ಕಾಚಾರಕ್ಕೆ ಅರ್ಧ ವರ್ಷದ ಸೇವಾವಧಿಯನ್ನು ಲೆಕ್ಕಹಾಕಲು, 3 ರಿಂದ 6 ತಿಂಗಳ ಸೇವಾ ಅವಧಿಯನ್ನು ಒಂದು ಅರ್ಧ ವರ್ಷವಾಗಿ ತೆಗೆದುಕೊಳ್ಳಬೇಕು ಮತ್ತು 3 ತಿಂಗಳಿಗಿಂತ ಕಡಿಮೆ ಸೇವಾ ಅವಧಿಯನ್ನು ಬಿಟ್ಟುಬಿಡಬೇಕು.

   d) ಸದಸ್ಯನಾಗಿ ಮತ್ತು ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ ಒಬ್ಬ ವ್ಯಕ್ತಿಯ ವಿಷಯಕ್ಕೆ ಸಂಬಂಧಸಿದಂತೆ, ಒಟ್ಟು ಸೇವೆಯ ಅವಧಿ ಎರಡು ವರ್ಷಗಳಿಗಿಂತ ಹೆಚ್ಚಿದ್ದರೆ, ಜವಾಬ್ದಾರಿಯನ್ನು ತ್ಯಜಿಸುವ ಮೊದಲು ಅವನು ಕೊನೆಯದಾಗಿ ನಿರ್ವಹಿಸಿದ ಹುದ್ದೆಗೆ ಅನ್ವಯಿಸುವ ಪಿಂಚಣಿ ಪಾವತಿಗೆ ಅರ್ಹನಾಗಿರುತ್ತಾನೆ.

   e) ಹೈಕೋರ್ಟ್ ನ್ಯಾಯಾಧೀಶರ (ಸೇವಾ ಷರತ್ತುಗಳು) ಅಧಿನಿಯಮ 1954 ರ ನಿಯಮ 2 ರ, ಮೊದಲ ಷೆಡ್ಯೂಲ್ ನ ಭಾಗ । ರ ಅಡಿಯಲ್ಲಿ ಹೈಕೋರ್ಟ್ ನ್ಯಾಯಾಧೀಶರಿಗೆ ಪಾವತಿಸಬೇಕಾದ ಪಿಂಚಣಿ ಪರಿಷ್ಕರಿಸಲ್ಪಟ್ಟಲ್ಲಿ, ರಾಜ್ಯ ಸರ್ಕಾರವು ಸೂಕ್ತ ನಿಯಮಗಳನ್ನು ತಿದ್ದುಪಡಿ ಮಾಡುವ ಮೂಲಕ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೂ ಅನುಗುಣವಾದ ಅರ್ಧ ವಾರ್ಷಿಕ ಸೇವಾ ಪಿಂಚಣಿಯನ್ನು ಪರಿಷ್ಕರಣೆ ಮಾಡಬೇಕು.

5) ಉಪ-ನಿಯಮ (4) ರ ಅಡಿಯಲ್ಲಿ ಪಾವತಿಸಬೇಕಾದ ಪಿಂಚಣಿಯನ್ನು ಬದಲಾವಣೆ ಮಾಡುವಂತಿಲ್ಲ.

6) ಅಧ್ಯಕ್ಷರು ಮತ್ತು ಸದಸ್ಯರಿಗೆ ಪಿಂಚಣಿ ಮಂಜೂರು ಮಾಡುವ ಪ್ರಾಧಿಕಾರವು ಕರ್ನಾಟಕದ ರಾಜ್ಯಪಾಲರಾಗಿರುತ್ತಾರೆ.

7) ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ನಿರಂತರ ಸೇವೆ ಸಲ್ಲಿಸಿದ ನಂತರ ಆಯೋಗದ ಸೇವೆಯಲ್ಲಿರುವಾಗಲೇ ಅಧ್ಯಕ್ಷ ಅಥವಾ ಸದಸ್ಯ ಮರಣಹೊಂದಿದಾಗ, ಮರಣಹೊಂದಿದ ದಿನಾಂಕದಂದು ತನಗೆ ಅರ್ಹವಾದ ಪಿಂಚಣಿಯ 50% ದರದಲ್ಲಿ ಲೆಕ್ಕಹಾಕಲಾದ ಕುಟುಂಬ ಪಿಂಚಣಿಯ ದರವನ್ನು ಅರ್ಹರಾದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ 7 ವರ್ಷಗಳ ಅವಧಿಗೆ ಅಥವಾ ಸದಸ್ಯ ಅಥವಾ ಅಧ್ಯಕ್ಷನು ಅವನು ಬದುಕಿದ್ದಿದ್ದರೆ, ಅವನ 62 ವರ್ಷ ವಯಸ್ಸಿನವರೆಗಿನ ದಿನಾಂಕದಲ್ಲಿ ಯಾವುದು ಮೊದಲೋ ಅಲ್ಲಿವರಗೂ ಮತ್ತು ನಂತರ ತಿಂಗಳಿಗೆ ಕನಿಷ್ಠ 375 ರೂ ಮಿತಿಗೆ ಒಳಪಟ್ಟು

ಕುಟುಂಬದ ಪಿಂಚಣಿಯ ಅರ್ಧದಷ್ಟು. ಕುಟುಂಬ ಪಿಂಚಣಿಯನ್ನು ಸದಸ್ಯ ಅಥವಾ ಅಧ್ಯಕ್ಷರಿಂದ ನಾಮ ನಿರದೇಶನ ಮಾಡಿದ ವ್ಯಕ್ತಿಗಳಿಗೆ ಅಥವಾ ಯಾವುದೇ ನಾಮನಿರ್ದೇಶನಮಾಡದಿದ್ದಲ್ಲಿ ಕಾನೂನುಬದ್ಧ ವಾರಸುದಾರನಿಗೆ ಪಾವತಿಸಲಾಗುತ್ತದೆ.

8) ಪಿಂಚಣಿ ಅಥವಾ ಕುಟುಂಬ ಪಿಂಚಣಿಯನ್ನು ಪ್ರತಿ ತಿಂಗಳ ಕೊನೆಯಲ್ಲಿ, ವಾರ್ಷಿಕವಾಗಿ ನೀಡಲಾಗುವ ಪಿಂಚಣಿಯ 1/12 ರಷ್ಟನ್ನು ನೀಡಲಾಗುವುದು.

**7) ಉಪದಾನ (ಗ್ರಾಚ್ಯುಟಿ) –**

ಆಯೋಗದಲ್ಲಿ ಎರಡೂವರೆ ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಸೇವೆಯನ್ನು ಪೂರ್ಣಗೊಳಿಸಿದ್ದರೆ, ಪೂರ್ಣಗೊಂಡ ಪ್ರತಿ ಸೇವೆಯ ವರ್ಷಕ್ಕೆ ಇಪ್ಪತ್ತು ದಿನಗಳ ಸಂಬಳದ ಆಧಾರದ ಮೇಲೆ ಲೆಕ್ಕ ಹಾಕಿದ ಉಪದಾನ (ಗ್ರ್ಯಾಚುಟಿ) ಪ್ರಯೋಜನಕ್ಕೆ ಅಧ್ಯಕ್ಷರು ಮತ್ತು ಸದಸ್ಯರು ಅರ್ಹರಾಗಿರುತ್ತಾರೆ.

**8) ಇತರ ಭತ್ಯೆಗಳು ಮತ್ತು ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳ ಅನ್ವಯ –**

ಪ್ರಯಾಣ ಭತ್ಯೆ, ರಜೆ ಪ್ರಯಾಣ ರಿಯಾಯಿತಿ, ವೈದ್ಯಕೀಯ ಚಿಕಿತ್ಸೆ, ವಸತಿ ಸೌಕರ್ಯ, ಸಂಪೀಡನ ಭತ್ಯೆ (ಸಂಪ್ಚುಯರಿ ಭತ್ಯೆ), ಸಾಗಣೆ (ವಾಹನಗಳು) ಮತ್ತು ಇತರ ಯಾವುದೇ ನಿರ್ದಿಷ್ಟ ನಿಬಂಧನೆಗಳನ್ನು ಹೊಂದಿಲ್ಲದ ವಿಷಯಗಳಿಗೆ ಸಂಬಂಧಿಸಿದಂತೆ, ಸದಸ್ಯರು ಮತ್ತು ಅಧ್ಯಕ್ಷರುಗಳಿಗೆ ಕಾಲಕಾಲಕ್ಕೆ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಅನ್ವಯವಾಗುವ ನಿಯಮ ಮತ್ತು ಆದೇಶಗಳಿಂದ ನಿಯಂತ್ರಿಸಲ್ಪಡತಕ್ಕದ್ದು.

**9) ಪ್ರವಾಸಗಳು –**

1) ಅಧ್ಯಕ್ಷರು ಮತ್ತು ಸದಸ್ಯರು ದೇಶದ ಒಳಗೆ ಅಥವಾ ದೇಶದ ಹೊರಗಿನ ಎಲ್ಲಾ ಪ್ರಯಾಣಗಳನ್ನು ಕ್ರಮವಾಗಿ ರಾಜ್ಯಪಾಲರಿಗೆ ಮಾಹಿತಿಯನ್ನು ನೀಡುವ ಮೂಲಕ ಅಥವಾ ಪೂರ್ವಾನುಮತಿಯ ಮೇರೆಗೆ ನಿರ್ವಹಿಸತಕ್ಕದ್ದು.

2) ಅಧ್ಯಕ್ಷರು ಮತ್ತು ಸದಸ್ಯರು ತಮ್ಮ ಸ್ವಂತ ಪ್ರಯಾಣ ಭತ್ಯೆ ಬಿಲ್ ಗಳಿಗೆ ಸಂಬಂಧಿಸಿದಂತೆ, ತಾವೇ ನಿಯಂತ್ರಣಾಧಿಕಾರಿಗಳಾಗಿರುತ್ತಾರೆ.

**10) ರಾಜೀನಾಮೆ –**

1) ಅಧ್ಯಕ್ಷರು ಅಥವಾ ಸದಸ್ಯರು ರಾಜ್ಯ ಸರ್ಕಾರಕ್ಕೆ ಲಿಖಿತವಾಗಿ ಮೂರು ತಿಂಗಳ ತಿಳುವಳಿಕೆ ನೀಡುವ ಮೂಲಕ ತಮ್ಮ ಕಚೇರಿಗೆ ರಾಜೀನಾಮೆ ನೀಡಬಹುದು.

2) ಆದಾಗ್ಯೂ, ರಾಜ್ಯ ಸರ್ಕಾರವು ತನ್ನ ವಿವೇಚನಾಧಿಕಾರದಂತೆ ಈ ಷರತ್ತನ್ನು ಚಲಾಯಿಸದಿರಬಹುದು.

**11) ಕೆಲವು ಸಂದರ್ಭಗಳಲ್ಲಿ ನಿಯಮಗಳ ಸಡಿಲಿಕೆಯ ಅವಕಾಶಗಳು –**

ಈ ಯಾವುದೇ ನಿಯಮಗಳ ಕಾರ್ಯಾಚರಣೆಯು ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಅನಗತ್ಯ ತೊಂದರೆಗಳನ್ನು ಉಂಟುಮಾಡುತ್ತದೆ ಎಂದು ರಾಜ್ಯ ಸರ್ಕಾರಕ್ಕೆ ಅನ್ನಿಸಿದಾಗ, ಅದು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಆ ನಿಯಮದ ಅವಶ್ಯಕತೆಯನ್ನು ಸಡಿಲಿಸಬಹುದು.